ತಮಸ್ಸು ನಾಶವಾಗುತ್ತಾ ಸೂರ್ಯರಶ್ಮಿಯು ಆವಿರ್ಭಾವವನ್ನು ಹೊಂದುತ್ತದೆಯೋ ಅದು ಸವಿತೃವಿನ ಕಾಲ ಎಂದು ಇದರ ಅರ್ಥ. ಸಾಯಣರು ಋಗ್ವೇದ ಭಾಷ್ಯದಲ್ಲಿ **'ಉದಯಾತ್ ಪೂರ್ವಭಾವೀ ಸವಿತಾ'** ಅಂದರೆ, ಉದಯಕ್ಕೆ ಪೂರ್ವಕಾಲದ ಸೂರ್ಯನಿಗೆ 'ಸವಿತೃ' ಎಂದು ಹೆಸರು ಎಂದಿದ್ದಾರೆ.

ಈ ಕೆಳಗಿನ ಮಂತ್ರದಲ್ಲಿ ಸವಿತೃದೇವತೆಯ ಒಂದು ಸುಂದರ ಚಿತ್ರಣವನ್ನು ಕಾಣಬಹುದು:

**ಆ ಕೃಷ್ಣೇನ ರಜಸಾ ವರ್ತಮಾನೋ**
**ನಿವೇಶಯನ್ನಮೃತಂ ಮರ್ತ್ಯಂ ಚ ।**
**ಹಿರಣ್ಮಯೇನ ಸವಿತಾ ರಥೇನಾ**
**ದೇವೋ ಯಾತಿ ಭುವನಾನಿ ಪಶ್ಯನ್ ॥ (೧–೧೩೫–೨)**

"ಕತ್ತಲೆಯ ಲೋಕದಿಂದ ಪುನಃ ಪುನಃ ಸಾರಿ ಬರುತ್ತಾ ಸವಿತೃದೇವನು ದೇವತೆಗಳನ್ನೂ, ಮಾನವರನ್ನೂ ಅವರವರ ಸ್ಥಾನದಲ್ಲಿ ಸುಸ್ಥಿರಗೊಳಿಸುತ್ತಾನೆ. ಎಲ್ಲ ಲೋಕಗಳನ್ನೂ ವೀಕ್ಷಿಸುತ್ತಾ ಸುವರ್ಣನಿರ್ಮಿತವಾದ ರಥದಲ್ಲಿ ನಮ್ಮೆಡೆಗೆ ಬರುತ್ತಿದ್ದಾನೆ."

ಈ ಸವಿತೃದೇವತೆಯೇ ಸರ್ವರ ಆರಾಧ್ಯ ದೇವತೆಯಾಗಿರುವ ಪ್ರಖ್ಯಾತ ಗಾಯತ್ರೀ ಮಂತ್ರದ ಅಧಿದೇವತೆ.

**ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।**
**ಧಿಯೋ ಯೋ ನಃ ಪ್ರಚೋದಯಾತ್ ॥**

"ಯಾವ ದೇವನು ನಮ್ಮ ಬುದ್ಧಿಯನ್ನು ಪ್ರೇರೇಪಿಸುತ್ತಾನೆಯೋ ಆ ಸವಿತೃ ದೇವನ ವರಣೀಯವಾದ ತೇಜಸ್ಸನ್ನು ಧ್ಯಾನಿಸುತ್ತೇವೆ" ಎಂದು ಇದರರ್ಥ.

ಪ್ರಾಚೀನ ಋಷಿಗಳು ಭಗವಂತನಾದ ಸವಿತೃದೇವನಿಂದ ಐಶ್ವರ್ಯವನ್ನಾಗಲೀ, ಭೋಗವನ್ನಾಗಲೀ ಯಾಚಿಸಲಿಲ್ಲ. "ನಮ್ಮ ಬುದ್ಧಿಯನ್ನು ಸನ್ಮಾರ್ಗದಲ್ಲಿ ನಡೆಸು, ಸದ್ಬುದ್ಧಿಯನ್ನು ಕೊಡು" ಎಂದು ಮಾತ್ರ ಕೇಳಿದರು. ಏಕೆಂದರೆ ಐಶ್ವರ್ಯಾದಿ ಸರ್ವವೂ ಬುದ್ಧಿಯ ಅಧೀನವಾಗಿಯೇ ಇದೆ.

**ನೀತಿಬೋಧನೆ – ಜನಜೀವನ:** ಋಗ್ವೇದದಲ್ಲಿ ಬರುವ ಕೆಲವು ನೀತಿಬೋಧಕ ವಾಕ್ಯಗಳು ರಮಣೀಯವಾಗಿವೆ. **'ನ ಸ ಸಖಾಯೋ ನ ದದಾತಿ ಸಖ್ಯೇ'** – 'ಸ್ನೇಹಿತನಿಗೆ ಏನನ್ನೂ ಕೊಡದವನು ನಿಜವಾದ ಸ್ನೇಹಿತನೇ ಅಲ್ಲ.' **'ಕೇವಲಾಘೋ ಭವತಿ ಕೇವಲಾದೀ'** – ಯಾರು ತನಗೋಸ್ಕರವೇ ಅಡಿಗೆ ಮಾಡಿ ಕೇವಲ ತಾನೇ ಊಟ ಮಾಡುತ್ತಾನೆಯೋ ಅವನು ಪಾಪಿ, ಅಂದರೆ ಪರರಿಗೆ ಹಂಚಿ ಊಟ ಮಾಡಬೇಕು ಎಂದು ತಾತ್ಪರ್ಯ. ಹಾಗೆಯೇ **'ಶ್ರಾಂತಸ್ಯ ಸಖ್ಯಾಯ ದೇವಾಃ'** – ಯಾರು ಕಷ್ಟಪಟ್ಟು ಕೆಲಸ ಮಾಡುತ್ತಾರೆಯೋ ಅವರಿಗೆ ಮಾತ್ರ ದೇವತೆಗಳು ಸ್ನೇಹಿತರು, ಸೋಮಾರಿಗೆ ಅಲ್ಲ ಎಂದು ಅಭಿಪ್ರಾಯ.

ಋಗ್ವೇದದಲ್ಲಿ ಬರುವ ಸೂಕ್ತಗಳು ಒಂದಲ್ಲ ಒಂದು ರೀತಿಯಲ್ಲಿ ಧಾರ್ಮಿಕ ಸಂಬಂಧವನ್ನು ಹೊಂದಿವೆ; ದೇವತೆಗಳಿಗೂ ಮಾನವರಿಗೂ ಬಿಡಲಾಗದ ಸಂಬಂಧವನ್ನು ನಿರೂಪಿಸಿವೆ. ಮಾನವಜೀವನದ ಉನ್ನತ ಧ್ಯೇಯಗಳಾದ ಸತ್ಯ, ಧರ್ಮ, ದಾನ, ಅದ್ರೋಹ, ನೈತಿಕತೆ ಮುಂತಾದವುಗಳನ್ನು ಮಾನವನು ದೇವತೆಗಳಿಂದ ಯಾಚಿಸುತ್ತಾನೆ. ನಿದ್ರೆ, ಕೋಪ, ಆಲಸ್ಯ, ಕೃಪಣತೆ, ದ್ರೋಹ, ಅನ್ಯನಿಂದೆ ಇವುಗಳಿಂದ ತನ್ನನ್ನು ದೂರ ಮಾಡಬೇಕೆಂದು ಸಹ ಪ್ರಾರ್ಥಿಸುತ್ತಾನೆ. ಲೌಕಿಕ ಜೀವನವು ಪರಿಪೂರ್ಣವಾಗಿದ್ದು, ಪವಿತ್ರವಾಗಿ ವಿಕಾಸಗೊಂಡು ಸಮಷ್ಟಿ ಮತ್ತು ವ್ಯಷ್ಟಿ ರೂಪವಾದ ಸಮಾಜದ ಕಲ್ಯಾಣಕ್ಕೆ ಕಾರಣವಾಗಬೇಕೆಂಬುದು ವೈದಿಕ ಋಷಿಗಳ ಆಶಯವಾಗಿತ್ತು. ಆದುದರಿಂದಲೇ ಅನೇಕ ಕಡೆ ಸಮಾಜದ ಅಭ್ಯುದಯಕ್ಕೆ ಸಾಧನವಾದ ಪರಿಶುದ್ಧ ಜೀವನವನ್ನೂ, ಐಹಿಕ ಸಮೃದ್ಧಿಯನ್ನೂ ದೇವತೆಗಳಲ್ಲಿ ಪ್ರಾರ್ಥಿಸಿದ್ದಾರೆ: **'ಭದ್ರಂ ನೋ ಅಪಿ ವಾತಯ ಮನಃ'** – "ನಮ್ಮ ಮನಸ್ಸನ್ನು ಸನ್ಮಾರ್ಗದಲ್ಲಿ ನಡೆಸು" ಎಂದು ಪುನಃ ಪುನಃ ಪ್ರಾರ್ಥಿಸಿದ್ದಾರೆ.

**ಋಗ್ವೇದದ ಕಾಲ:** ಪಾಶ್ಚಾತ್ಯ ವಿದ್ವಾಂಸರೂ, ಪ್ರಪ್ರಥಮವಾಗಿ ಋಗ್ವೇದವನ್ನು ಮುದ್ರಣ ಮಾಡಿಸಿದವರೂ ಆದ ಮ್ಯಾಕ್ಸ್ ಮುಲ್ಲರ್ ಅವರು ಋಗ್ವೇದದ ಕಾಲ ಕ್ರಿ.ಪೂ. ೧, ೨೦೦ ಎಂದು ಅಭಿಪ್ರಾಯಪಡುತ್ತಾರೆ. ವಿಮರ್ಶಕರಾದ ಮೆಗ್ಡನಲ್ ಕೀಥ್ ಮುಂತಾದವರೂ ಇದೇ ಅಭಿಪ್ರಾಯ ಹೊಂದಿದ್ದಾರೆ. ಜಾಕೋಬಿ ಮತ್ತು ಬಾಲ ಗಂಗಾಧರ ತಿಲಕರು ಖಗೋಳಶಾಸ್ತ್ರದ ಆಧಾರದ ಮೇಲೆ ಋಗ್ವೇದದ ಕಾಲ ಕ್ರಿ.ಪೂ. ೪,೫೦೦ ಇರಬಹುದು ಎಂದು ಅಭಿಪ್ರಾಯಪಡುತ್ತಾರೆ. ನಮ್ಮ ಸನಾತನ ಪರಂಪರೆಯಲ್ಲಿ ಕೃತಯುಗದ ಹರಿಶ್ಚಂದ್ರನಿಂದ ಹಿಡಿದು ಶ್ರೀರಾಮ, ಶ್ರೀಕೃಷ್ಣ, ಬುದ್ಧ ಹಾಗೂ ವಸಿಷ್ಠಾದಿ ಮಹರ್ಷಿಗಳೂ ವೇದದ ಪರಿಚಯವನ್ನು ಹೊಂದಿದವರೇ ಆಗಿದ್ದಾರೆ. ವೇದವನ್ನು ಬಿಟ್ಟು ನಮ್ಮ ಸಮಾಜ ಹಿಂದೆ ಎಂದೂ ಇದ್ದದ್ದೇ ಇಲ್ಲ. ಆದ್ದರಿಂದ ವೇದದ ಕಾಲವನ್ನು ಊಹಿಸುವುದು ಸುಲಭವಲ್ಲ. ವೇದವು ಅನಾದಿ, ಸನಾತನ ಎಂದು ಮಾತ್ರ ಹೇಳಬಹುದು.

### ಉಪಸಂಹಾರ

ಋಗ್ವೇದದ ಕೊನೆಯ ಮಂತ್ರದ ಸಂದೇಶ ಹೀಗಿದೆ:

**ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ।**
**ಸಮಾನಮಸ್ತು ವೋ ಮನೋ ಯಥಾ ವಃ ಸುಹಾಸತಿ ॥**
**(೧೦–೧೯೧–೪)**

"ನಿಮ್ಮೆಲ್ಲರ ಅಭಿಪ್ರಾಯಗಳು ಸಮಾನವಾಗಿರಲಿ, ಒಂದಾಗಿರಲಿ. ನಿಮ್ಮೆಲ್ಲರ ಹೃದಯಗಳು ಒಂದಾಗಿರಲಿ. ನಿಮ್ಮೆಲ್ಲರ ಮನಸ್ಸು ಸಮಾನವಾಗಿರಲಿ."

**ದೇವತೆಗಳ ಸ್ಥಾನವಾದ 'ದ್ಯುಲೋಕ' ವೆಂದರೆ ಏನು?**

ದೇವತೆಗಳಿಗೆ 'ಪೃಥಿವೀ', 'ಅಂತರಿಕ್ಷ' ಮತ್ತು 'ದ್ಯುಸ್ಥಾನ' ವೆಂದು ಮೂರು ಸ್ಥಾನಗಳನ್ನು ವೇದಗಳಲ್ಲಿ ಹೇಳಿದೆ. ಇದರಲ್ಲಿ 'ಪೃಥಿವೀ' ಎನ್ನುವುದು ಪ್ರಸಿದ್ಧವಾದ ಭೂಮಿ. 'ಅಂತರಿಕ್ಷ' ವೆಂದರೆ, ಭೂಮಿ ಮತ್ತು 'ದಿವ್' ಅಂದರೆ, ಸ್ವರ್ಗ ಅಥವಾ ದ್ಯುಲೋಕ – ಇವುಗಳ ಮಧ್ಯದಲ್ಲಿರುವ ಅಮೂರ್ತವಾದ ಪ್ರದೇಶ. 'ದ್ಯುಲೋಕ'ವೆಂದರೆ ದಿವಿ – ಸ್ಥಾನ = ದ್ಯುಸ್ಥಾನ ಅಂದರೆ ಅಂತರಿಕ್ಷದ ಮೇಲಿನ ಸ್ವರ್ಗಲೋಕ. ಇಲ್ಲಿ ತೇಜಸ್ಸಂಪನ್ನರಾದ ನಿತ್ಯತೃಪ್ತರಾದ ದೇವತೆಗಳು ವಾಸಿಸುತ್ತಾರೆ. ಪೃಥಿವೀಸ್ಥಾನನಾದ ಅಗ್ನಿಯು ವಿದ್ಯುದ್ರೂಪದಿಂದ ಅಂತರಿಕ್ಷದಲ್ಲಿಯೂ, ದಿವ್ಯಾಗ್ನಿರೂಪದಿಂದ ದ್ಯುಲೋಕದ ಸೂರ್ಯನಾಗಿಯೂ ಪ್ರಕಾಶಿಸುತ್ತಾನೆ. ದ್ಯೌಃ (ದಿವ್) ಶಬ್ದಕ್ಕೆ 'ಆಕಾಶ', 'ಗಗನ' ಎಂಬ ಅರ್ಥಗಳೂ ಇವೆ. –*ಲೇಖಕ*